nation with the Revenue Department and if need be, with the Forest Department. Please sort out the matter in coordination with the concerned Departments and see that action is taken to construct the busstand. Will you kindly tell me in what point of time, it will be completed and construction of busstand will be completed ?

ಶ್ರೀ ಕೆ. ಜೆ. ಜಾರ್ಜ್.— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಅಧಿಕಾರಿಗಳು ಒಂದೆರಡು ಜಾಗಗಳನ್ನು ನೋಡಿಕೊಂಡು ಬಂದಿದ್ದಾರೆ. ಯೂಶುವಲ್ ಪ್ರೊಸೆಸ್ ಪ್ರಕಾರ ಅವರೇ ಮುಂದಾಗಬೇಕು, ಆದರೂ ಡೆಪ್ಯೂಟಿ ಕಮೀಷನರ್ ಅವರಿಗೆ ಬರೆಯಲಿಕ್ಕೆ ನಾನು ಆದೇಶ ಕೊಡುತ್ತೇನೆ, ಡೆಪ್ಯೂಟಿ ಕಮೀಷನರ್ ಅವರು ಪ್ರೊಸಸ್ ಮಾಡಬೇಕೇ ಹೊರತು ನಾವು ಇಬ್ಬರು ಮಂತ್ರಿಗಳು ಏನು ಮಾಡುವುದಕ್ಕೆ ಆಗುವುದಿಲ್ಲ.

MR. SPEAKER.— He wanted your personal touch in the matter.

SRI K. J. GEORGE.— It is always there.

SRI K. LAKKAPPA — Sir, the Deputy Commissioner is a small officer in the District. Here, the matter has to be sort out in co-ordination withe the Ministry of Transport and the Ministry of Revenue. The lease of the Turf Club is coming to an end. The said land is not being used by them at all and it is a vacant place. They have put some fencing and other things. That is all.

ಶ್ರೀ ಕೆ. ಜೆ. ಜಾರ್ಜ್.—ಅದು ವೇಕೆಂಟ್ ಲ್ಯಾಂಡ್ ಅಲ್ಲ; ಟರ್ಫ್ ಕ್ಲಬ್ ವಶದಲ್ಲಿದೆ. ಸರ್ಕಾರದವರು ಲೀಸ್‌ಗೆ ಕೊಟ್ಟಿದ್ದಾರೆ. ಅವರಿಂದ ಬಿಡಿಸಿ ನಮಗೆ ಕೊಡಲು ಕೆಲವೊಂದು ಪ್ರೊಸೀಜರ್ಸ್ ಇವೆ, ಫಾರ್ಮಾಲಿಟೀಸ್ ಇವೆ.

MR. SPEAKER.—The lease period of the Turf Club is coming to an end. At that point of time, keep Mr. Lakkappa's plea in mind and follow it up.

(Few Hon. Members were standing around the seat of Sri M. Veerappa Moily)

MR. SPEAKER.—I expect some cooperation from the Hon. Members of the Treasury Bench. Too much crowding there would distort the proceedings of this House. I would request the Hon. Members to kindly observe the minimum courtesy that you owe to this House.

ವಿಟ್ಲದಲ್ಲಿ ಟಿ. ಸಿ. ಕಛೇರಿಯಲ್ಲಿ ಬಸ್‌ಪಾಸಂ

೯೫೯. ಶ್ರೀ ವಿ. ರುಕ್ಕಯ್ಯ ಪೂಕಾರಿ, (ವಿಟ್ಲ).— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರಕಾರದ ಸಾರಿಗೆ ಇಲಾಖೆಯು ಟಿ. ಸಿ. ಕಛೇರಿಯು ವಿಟ್ಲದಲ್ಲಿ ಪ್ರಾರಂಭವಾಗಿದೆಯೇ ?

ಆ) ಹಾಗಿದ್ದಲ್ಲಿ ಅಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಸ್ಸು ಪಾಸು ಕೊಡುವ ವ್ಯವಸ್ಥೆ ಮಾಡಲಾಗುವುದೆ ?

ಇ) ಹಾಗಿದ್ದಲ್ಲಿ ಎಂದಿನಿಂದ ನೀಡಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಎ) ಹೌದು

ಬಿ) ಹೌದು

ಸಿ) ಶೀಘ್ರದಲ್ಲಿಯೇ ನೀಡಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ. — ವಿಟ್ಲದ ವಿದ್ಯಾರ್ಥಿ ವಿದ್ಯಾರ್ಥಿನಿಯರು ದೂರದ ಹೈಸ್ಕೂಲ್ ಮತ್ತು ಕಾಲೇಜುಗಳಿಗೆ ಹೋಗಬೇಕಾದರೆ, ಅವರು ಬಸ್ ಪಾಸ್ ಪಡೆಯಲು ಪುತ್ತೂರು ಅಥವಾ ಮಂಗಳೂರಿಗೆ ಹೋಗಬೇಕಾಗಿದೆ. ವಿಟ್ಲದಲ್ಲಿ ಕೂಡ ಟ್ರಾಫಿಕ್ ಕಂಟ್ರೋಲ್ ಕೌಂಟರನ್ನು ಓಪನ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೂ ಪಾಸ್ ಮಾತ್ರ ಕೊಡುತ್ತಿಲ್ಲ. ಆದ್ದರಿಂದ ಅಲ್ಲಿಯೂ ಮಕ್ಕಳು, ಅಲ್ಲಿಯೇ ಪಾಸ್ ಪಡೆಯುವಂಥ ವ್ಯವಸ್ಥೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಆದುದರಿಂದ ಈ ರೀತಿಯ ಕಾರ್ಯಕ್ರಮ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.— ಈಗಾಗಲೇ ವಿಟ್ಲದಲ್ಲಿ ಟ್ರಾಫಿಕ್ ಕಂಟ್ರೋಲ್ ಆಫೀಸಿನಲ್ಲಿ ಪಾಸ್ ಕೊಡುವಂಥ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಅಷ್ಟು ಮಾತ್ರವಲ್ಲ, ಎಜುಕೇಷನ್ ಮಿನಿಸ್ಟರು ಮತ್ತು ನಾನು ಸೇರಿ ಮುಂದಿನ ಆಗಸ್ಟ್ ೧ನೇ ತಾರೀಖಿನಿಂದ ಆಯಾ ಸ್ಕೂಲ್ ಮತ್ತು ಕಾಲೇಜುಗಳಲ್ಲೇ ಪಾಸ್ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ದೇವರಾಯನ ದುರ್ಗವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಕುರಿತಂ

ಖಿರ್ಜಿ. ಶ್ರೀ ಶಫಿ ಅಹಮ್ಮದ್, (ತುಮಕೂರು).— ಮಾನ್ಯ ಯೋಜನೆ, ಕಾನೂನು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ೧೯೮೧-೮೨ನೇ ಸಾಲಿನಲ್ಲಿ ದೇವರಾಯನ ದುರ್ಗ ಗಿರಿಧಾಮವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲು ವಾರ್ಷಿಕ ಅನುದಾನದಲ್ಲಿ ಹಣವನ್ನು ನಿಗದಿಪಡಿಸಲಾಗಿದ್ದಿತೆ ?

ಬಿ) ಈ ಸ್ಥಳವನ್ನು ಅಭಿವೃದ್ಧಿಪಡಿಸಲಂ ಸರ್ಕಾರವು ಕೈಗೊಂಡಿರುವ ಕಾರ್ಯಗಳಾವುವು ?

ಶ್ರೀ ಬಿ. ಶಿವಣ್ಣ (ಯೋಜನೆ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ).—

ಎ) ಹೌದು.

ಬಿ) ದೇವರಾಯನ ದುರ್ಗದಲ್ಲಿ ಪ್ರವಾಸಿ ಬಂಗಲೆಯನ್ನು ನವೀಕರಿಸಲಾಗಿದೆ. ದೇವರಾಯನ ದುರ್ಗದ ಬಗ್ಗೆ ಈಗಾಗಲೇ ಸಾಕಷ್ಟು ಪ್ರಚಾರ ಮಾಡಲಾಗಿದ್ದು, ಈ ಸ್ಥಳವು ಅತಿ ಪ್ರಾಮುಖ್ಯವಾದುದೆಂದು ''ಬೆಂಗಳೂರು ಸುತ್ತಮುತ್ತ'' ಪ್ರವಾಸಿ ಮಾಡಿಕೆಯಲ್ಲಿ ಅಳವಡಿಸಲಾಗಿದೆ.

ಶ್ರೀ ಶಫಿ ಅಹಮ್ಮದ್.—ಮಾನ್ಯ ಅಧ್ಯಕ್ಷರೇ, ದೇವರಾಯನದುರ್ಗ, ಬೆಂಗಳೂರಿಗೆ ಬಹಳ ಸಮೀಪದಲ್ಲಿದೆ. ಸುಮಾರು ೪ ಸಾವಿರ ಅಡಿ ಎತ್ತರದಲ್ಲಿದೆ, ಇದು ಪ್ರವಾಸಕ್ಕೆ ಸೂಕ್ತವಾದ ಜಾಗವೆಂದು ತೀರ್ಮಾನಿಸಿ, ೧೯೮೧-೮೨ರಲ್ಲಿ ಸರ್ಕಾರ ಒಂದು ಸಮಗ್ರ ಯೋಜನೆ ತಯಾರು ಮಾಡಿ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ಟೂರಿಸಂ ಡಿಪಾರ್ಟ್‌ಮೆಂಟ್‌ನವರು ಈ ಸ್ಕೀಮ್‌ನಲ್ಲಿ ಸೇರಿಸಿದ್ದರು. ಆಗ ಸರ್ಕಾರದವರು ಹಣವನ್ನೂ ಸಹಿತ ಕೊಟ್ಟಿದ್ದರು. ಆದ್ದರಿಂದ, ಈಗಿನ ಮಾತ್ರ ಹೊಸ ಯೋಜನೆಯಲ್ಲಿ, ದೇವರಾಯನದುರ್ಗವನ್ನೂ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿದ ಪ್ರಕಾರ, ಈ ದೇವರಾಯನದುರ್ಗ ಒಂದು ಅತ್ಯುತ್ತಮ ಗಿರಿಧಾಮವಾಗುವುದಕ್ಕೆ ಸಾಧ್ಯವಿದೆ. ಇದರ ಬಗ್ಗೆ ಸಾಕಷ್ಟು ಪ್ರಚಾರ ಕೂಡ ಮಾಡಿದ್ದೇವೆ. ಇದನ್ನು ಅಭಿವೃದ್ಧಿ ಮಾಡುವುದಕ್ಕೆ ೧೯೮೧-೮೨ರಲ್ಲಿ ನಾನು ಪ್ರವಾಸೋದ್ಯಮ ಸಚಿವನಾಗಿದ್ದಾಗ, ೨ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿತ್ತು. ಆ ಮೇಲೆ ಅಭಿವೃದ್ಧಿಪಡಿಸುವುದಕ್ಕೆ ಬೇರೆ ಬೇರೆ ತೊಂದರೆಗಳು ಬಂದವು. ಮುಖ್ಯವಾಗಿ ಅಲ್ಲಿ ಕುಡಿಯುವ ನೀರಿನ ತೊಂದರೆ ಬಂತು. ಅದಕ್ಕಾಗಿ ೬ ಲಕ್ಷ ರೂಪಾಯಿಗಳ ಯೋಜನೆಯನ್ನು ಈಗಾಗಲೇ